ಮಂಜೂರಾತಿ ದೊರೆತಿದೆ. ಆದಷ್ಟುಬೇಗ ಏಪ್ರಿಲ್ ಕೊನೆ ಅಥವಾ ಮೇ ಮೊದಲು ವಾರದಲ್ಲಿ ಕೆಲಸ ಪ್ರಾರಂಭಮಾಡುತ್ತೇವೆ.

ಅಧ್ಯಕ್ಷರು :— ಏಪ್ರಿಲ್ ಮೇ ಒಳಗೆ ಮಾಡುತ್ತೇವೆಂದು ಹೇಳಿದ್ದಾರೆ, ತಾವು ಕೂಡಿ. ನಿಮಗೆ ಅನುಕೂಲವಾಗುತ್ತದೆ.

ಶ್ರೀ ರಾಜಶೇಖರ ಶೀಲವಂತ ವೀರಣ್ಣ :— ಜನರಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು :— ಹೌದು ಜನರ ಪ್ರತಿನಿಧಿ ಅಲ್ಲವೇ ನೀವು? ಒಳ್ಳೇ ಕತೆಯಾಯಿತು. ನಿಮ್ಮ ಅನುಕೂಲಕ್ಕೆ ನಾನು ಕೇಳಿದ್ದೇನೆ.

ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ವಿದ್ಯುತ್ ಮಂಡಳಿಯ ಸಬ್ ಸ್ಟೇಷನ್ ಸ್ಥಾಪಿಸುವ ಬಗ್ಗೆ.

4 (236) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು ರಂಗನಾಥಪುರದಲ್ಲಿ ಕೆಇಬಿ ಸಬ್-ಸ್ಟೇಷನ್ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆಯೇ?

ಆ) ತುಮಕೂರು ಜಿಲ್ಲೆ ಕೆ.ಜಿ. ಟಿಂಪಲ್ ವಿದ್ಯುತ್ ಉಪಸ್ಥಾವರದ ಕೇಂದ್ರವನ್ನು ತೆರೆಯಲು ಅನುಮತಿ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ ಯಾವ ದಿನಾಂಕದಿಂದ ಅನುಮತಿ ನೀಡಲಾಗಿದೆ ಮತ್ತು ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿದೆ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಇಲ್ಲ.

ಆ) ಹೌದು, ಮಂಡಳಿಯ ತಾಂತ್ರಿಕ ಸಮಿತಿಯು ಅನುಮೋದನೆ ನೀಡಿದೆ.

ಇ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕಿನ ರಂಗನಾಥಪುರದಲ್ಲಿ ಕೆ.ಇ.ಬಿ. ಸಬ್-ಸ್ಟೇಷನ್‌ನ ಸ್ಥಾಪನೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಕೆ.ಜಿ. ಟೆಂಪಲ್ ಸಮೀಪ ಒಂದು 66:11 ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆಯ ಪ್ರಸ್ತಾವನೆಗೆ ಮಂಡಳಿಯ ತಾಂತ್ರಿಕ ಸಮಿತಿಯು ಜನವರಿ 1999 ರಲ್ಲಿ ಅನುಮೋದನೆ ನೀಡಿದೆ. ಈ ಕಾಮಗಾರಿಯ ನಿರ್ವಹಣೆಗಾಗಿ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯಗಳನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ. ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಮಂಜೂರಾದ ನಂತರ ಹಾಗೂ ಮಂಡಳಿಯ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಈ ಕೆಲಸವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಕೆ.ಜಿ. ಟೆಂಪಲ್ ವಿದ್ಯುತ್ ಉಪಸ್ಥಾವರ ಕೇಂದ್ರವನ್ನು ತೆರೆಯಲು ಮಂಡಳಿಯ ತಾಂತ್ರಿಕ ಸಮಿತಿಯ ಅನುಮೋದನೆ ದೊರಕಿದೆ. ಅದರ ಎಸ್ಟಿಮೇಟ್ ಕೂಡ ಆಗಿದೆ. ಇದುವರೆಗೆ ಯಾವುದೇ ಕಾರ್ಯಕ್ರಮ ಆಗಿಲ್ಲ. ವೋಲ್ಟೇಜ್ ಮೆಂಟೇನೆನ್ಸ್ ಇಲ್ಲದೆ ಪಂಪ್‌ಸೆಟ್‌ಗಳಿಗೆ ಬಹಳ ತೊಂದರೆಯಾಗಿದೆ. ಅದನ್ನು ಕೆ.ಇ.ಬಿ. ಇಲಾಖೆಯ ಗಮನಕ್ಕೂ ತಂದೆ. ಆದ್ದರಿಂದ ಒಂದು ಕಾಲಮಿತಿಯೊಳಗೆ ತಾವು ಮಾಡತಕ್ಕಂಥ ಒಂದು ವಿಚಾರವನ್ನು ಶಾಸನ ಸಭೆಯಲ್ಲಿ ತಿಳಿಸಬೇಕು. 'ಇದನ್ನು ಮಾಡಲಾಗುತ್ತದೆ' 'ಮುಂದೆ ನೋಡಲಾಗುತ್ತದೆ' ಎಂದರೆ ಪ್ರಯೋಜನ ಇಲ್ಲ. ಒಂದು ಕಾಲಮಿತಿಯೊಳಗೆ ಯಾವುದೇ ಕಾರ್ಯಕ್ರಮವನ್ನು ವಿದ್ಯುಚ್ಛಕ್ತಿ ಇಲಾಖೆಯವರು ಮಾಡಬೇಕು. ಏಕೆಂದರೆ ಕೃಷಿ ಕ್ಷೇತ್ರ ವಿದ್ಯುಚ್ಛಕ್ತಿ ಮೇಲೆ ನಿಂತಿರುವುದರಿಂದ ಕಾಲ ವಿಳಂಬ ಮಾಡಬಾರದು. ಇದೇ ರೀತಿ ರಂಗನಾಥಪುರದ್ದು ತಾವು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದೀರಿ. ಯಾವ ಕಾರಣಕ್ಕೆ ಇದನ್ನು ಮಾಡುವುದಕ್ಕೆ ಬರುವುದಿಲ್ಲ? ಇದೇರೀತಿ ಇನ್ನೊಂದು ಚಿನ್ನಕುರುಳಿಯದ್ದು. ಈಗಾಗಲೇ ನಾಲ್ಕೈದು ವರ್ಷವಾಗಿದೆ. ಎಸ್ಟಿಮೇಟ್ ಆಗಿದ್ದರೂ ಕೂಡ ಯಾವುದೇ ಕಾರ್ಯಕ್ರಮ ಇಲ್ಲ. ವೋಲ್ಟೇಜ್ ಮೇನ್‌ಟೇನ್ ಮಾಡದೇ ಇದ್ದರೆ ಪಂಪುಸೆಟ್ಟುಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಕನಿಷ್ಠ 300ರಿಂದ 350 ವೋಲ್ಟೇಜ್ ಪವರ್ ಬರದೇ ಇದ್ದರೆ ಯಾವುದೇ ಪಂಪುಸೆಟ್ಟು ರನ್ ಆಗುವುದಿಲ್ಲ. ಕೇವಲ ಪಂಪುಸೆಟ್ಟುಗಳನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಆ ಲೆವಲ್‌ಗೆ ವೋಲ್ಟೇಜ್‌ನ್ನು ಮೇಯಂಟೇನ್ ಮಾಡುತ್ತಾ ಇಲ್ಲ. ಈ ರೀತಿ ಮೇಯಂಟೇನ್ ಮಾಡುವುದಕ್ಕೆ, ಉಪಕೇಂದ್ರವನ್ನು ತೆಗೆಯದೇ ಇರುವುದಕ್ಕೆ ಏನು ಕಾರಣ? ಇದಕ್ಕೆ ಯಾವ ತೊಂದರೆ ಇದೆ? ದಯವಿಟ್ಟು ಪೂರ್ಣವಾಗಿ ಒಂದು ಕಾಲಮಿತಿಯೊಳಗೆ ಕೆಲಸ ಮಾಡತಕ್ಕಂಥ ವ್ಯವಸ್ಥೆಯನ್ನು ತಾವು ಸದನದಲ್ಲಿ ಹೇಳಬೇಕು.

ಶ್ರೀ ಶರಣಬಸಪ್ಪ ದರ್ಶನಾಪುರ :— ಮಾನ್ಯ ಸದಸ್ಯರು ಕೇಳಿದ ಮೊದಲನೇ ಪ್ರಶ್ನೆಯಲ್ಲಿ ರಂಗನಾಥಪುರದಲ್ಲಿ ಹೊಸ ಸಬ್ ಸ್ಟೇಷನ್ ಬಗ್ಗೆ ಕೇಳಿದ್ದಾರೆ. ಈಗಾಗಲೇ

ಅದರ ಪಕ್ಕದಲ್ಲಿ ಐದು ಕಿಲೋಮೀಟರ್ ದೂರದಲ್ಲಿ ಇರತಕ್ಕಂಥ ಸಂತೆಬಾಚನಹಳ್ಳಿಯ ಸಬ್ ಸ್ಟೇಷನ್‌ಗೆ ಈಗಾಗಲೇ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಈಗ ಲ್ಯಾಂಡನ್ನು ಕೂಡ ಐಡೆಂಟಿಫೈ ಮಾಡುತ್ತಿದ್ದೇವೆ. ರಂಗನಾಥಪುರದಲ್ಲಿ ಆಗಬೇಕೆಂದು ಮಾನ್ಯಶಾಸಕರು ಹೇಳಿದ್ದಾರೆ. ಅದರ ಬಗ್ಗೆ ಮತ್ತೊಮ್ಮೆ ನೋಡಿಕೊಂಡು ಬನ್ನಿ ಮತ್ತು ಲೋಡ್ ಅಸೆಸ್ ಮಾಡಲಿಕ್ಕೆ ಹೇಳಿದ್ದೇನೆ. ಆದರೆ ಈಗಾಗಲೇ ಐದು ಕಿಲೋಮೀಟರ್ ದೂರದಲ್ಲಿರುವ ಸಂತೆಬಾಚನಹಳ್ಳಿಯದ್ದಕ್ಕೆ ಎಲ್ಲಾ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಆದಷ್ಟು ಬೇಗ ಲ್ಯಾಂಡ್ ಸಿಕ್ಕಿದ ತಕ್ಷಣ ಕೆಲಸ ಪ್ರಾರಂಭ ಮಾಡುತ್ತೇವೆ. ಎರಡನೇಯದು ಉಪಪ್ರಶ್ನೆ ಕೇಳಿದ್ದಾರೆ. ಇದು ಕೆ.ಜಿ. ಟಿಂಪಲ್ ವಿದ್ಯುತ್ ಉಪಕೇಂದ್ರದ ಸ್ಥಾಪನೆ ಗುಬ್ಬಿ ತಾಲ್ಲೂಕಿನಲ್ಲಿದ್ದು ಸುಮಾರು 3ಕೋಟಿ 65 ಲಕ್ಷ ರೂಪಾಯಿ ವಿಚಾರದಲ್ಲಿ ಮಂಜೂರಾತಿಗೆ ಕಳುಹಿಸಿದ್ದೇವೆ. ಆರ್.ಇ.ಸಿ. ಯವರು ಮಾರ್ಚ್ ಕೊನೆಯೊಳಗೆ ಕೊಡಬಹುದು. ಕೊಟ್ಟ ತಕ್ಷಣ ಲ್ಯಾಂಡ್ ತೆಗೆದುಕೊಂಡು ಮುಂದಿನ ಪ್ರೊಸೆಸ್ ಏನಿದೆ ಆ ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಚಿನಕುರುಳಿಯದ್ದು ಏನು ಮಾಡಿದ್ದೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ :— ಇದರ ಬಗ್ಗೆ ಮಾಹಿತಿ ಇಲ್ಲ. ಇನ್ನು ಎರಡು ಗಂಟೆಯೊಳಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಕೆ.ಜಿ. ಟಿಂಪಲ್ ತುಮಕೂರಿನಲ್ಲಿ, ಗುಬ್ಬಿ ತಾಲ್ಲೂಕಿನಲ್ಲಿ ಬರುತ್ತದೆ. ನಾನು ಮಾನ್ಯ ಸಚಿವರಿಗೆ ಕೇಳುವುದು ಏನೆಂದರೆ ಎಲ್ಲಾ ರಿಸೀವಿಂಗ್ ಸ್ಟೇಷನ್‌ಗಳೂ ಓವರ್ ಲೋಡ್ ಆಗಿದೆ. ಒಂದು ಕಡೆ ಮಾನ್ಯ ಸಚಿವರು ಎಂ.ಇ.ಎಸ್.ಎಸ್. ಗಳನ್ನು ಮಾಡಿಕೊಂಡು ಹೋಗುತ್ತಾರೆ. ಇನ್ನೊಂದು ಕಡೆ ರಿಸೀವಿಂಗ್ ಸ್ಟೇಷನ್ ಗಳು ಓವರ್ ಲೋಡ್ ಆಗಿ ಅಲ್ಲಿಗೇನೇ ಪವರ್ ಫೀಡ್ ಮಾಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಏನಾದರೂ ಆಲೋಚನೆ ಮಾಡಿದ್ದೀರಾ? ಅದು ತುಮಕೂರು ಜಿಲ್ಲೆಯಲ್ಲಿ ಬಂದಿದ್ದರಿಂದ ಮತ್ತು ಕಿಬ್ಬನಹಳ್ಳಿ ರಿಸೀವಿಂಗ್ ಸ್ಟೇಷನ್‌ನಲ್ಲಿ ಲೋಡ್ ಇದೆ. ಆದ್ದರಿಂದ ರಿಸೀವಿಂಗ್ ಸ್ಟೇಷನ್‌ಗಳ ಕೆಪ್ಯಾಸಿಟಿಯನ್ನು ಜಾಸ್ತಿ ಮಾಡುತ್ತೀರಾ?

ಶ್ರೀ ಆರಗ ಜ್ಞಾನೇಂದ್ರ :— ಇದಕ್ಕೆ ಸಂಬಂಧಪಟ್ಟಹಾಗೆ ಇಡೀ ರಾಜ್ಯದಲ್ಲಿ ಸಮಸ್ಯೆ ಇದೆ. ಯಾವ ಊರಿನಲ್ಲೂ ವೋಲ್ಟೇಜ್ ಸರಿಯಿಲ್ಲ. ಏಕೆಂದರೆ ಹೊಸ ಅಕ್ರಮ ಸಕ್ರಮ ಮಾಡುವುದಕ್ಕೆ ಅವರು ಅವಕಾಶ ಕೊಟ್ಟು ಎಲ್ಲಾ ಟಿ.ಸಿ.ಗಳಲ್ಲೂ ಲೋಡ್ ಜಾಸ್ತಿಯಾಗಿದೆ. ಎಲ್ಲಾ ರಿಸೀವಿಂಗ್ ಸ್ಟೇಷನ್ ಗಳಲ್ಲೂ ಲೋಡ್ ಜಾಸ್ತಿಯಾಗಿದೆ.

ಆದ್ದರಿಂದ ಎಲ್ಲಾ ಕಡೆ ಸಬ್ ಸ್ಟೇಷನ್‌ಗಳನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ಏನಾದರೂ ಸ್ಪಷ್ಟವಾದಂಥ ಕಾರ್ಯಕ್ರಮ ಹಾಕಿಕೊಳ್ಳಬೇಕು. ಅಕ್ರಮ ಸಕ್ರಮ ಮಾಡಿದ್ದರಿಂದ ಬೇಕಾದ ಕಡೆ ಕಂಟ್ರಾಕ್ಟರ್ಸ್ ಮತ್ತು ಅಧಿಕಾರಿಗಳು ಸೇರಿಕೊಂಡು ಹೊಸದಾಗಿ ಲೈನ್ ಎಳೆಯುತ್ತಿದ್ದಾರೆ.

ಶ್ರೀ ಜೆ.ಎಚ್. ಪಟೇಲ್ (ಮುಖ್ಯಮಂತ್ರಿಗಳು) :— ವೋಲ್ಟೇಜ್ ಬಗ್ಗೆ ಅದು ಇನ್ನೂ ಅನಿವಾರ್ಯ. ಆದರೆ ಪಂಪುಸೆಟ್ಟುಗಳಿಗೆ ಹಾನಿ ಆಗದಹಾಗೆ ನೋಡಿಕೊಳ್ಳುವುದಕ್ಕೆ ನಾವು ಏನು ಮಾಡಿದ್ದೇವೆ ಎಂದರೆ ಈ ವರ್ಷವೇ ಸುಮಾರು 70 ಕ್ಕಿಂತ ಹೆಚ್ಚು ಸಬ್ ಸ್ಟೇಷನ್‌ಗಳನ್ನು ಮಾಡುತ್ತಿದ್ದೇವೆ. ಆ ಸಬ್ ಸ್ಟೇಷನ್‌ಗಳಲ್ಲಿ ಜನರೇಟ್ ಮಾಡುವುದು ಅಲ್ಲ. They only regulate the flow of electricity. ಆದ್ದರಿಂದ ತುಮಕೂರಿನದ್ದೇ ಇರಲಿ, ಅಥವಾ ತೀರ್ಥಹಳ್ಳಿಯದ್ದೇ ಇರಲಿ, ಈ ವರ್ಷವೇ ಸುಮಾರು ಆರುನೂರು ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಆಡ್ ಮಾಡಿದ್ದೇವೆ. ಆಡ್ ಮಾಡಿದ ತಕ್ಷಣ ವೋಲ್ಟೇಜ್ ಫ್ಲಕ್ಚುಯೇಷನ್ ನಿಲ್ಲುವುದಿಲ್ಲ. But it has got to be systematically improved. System improvement is necessary, which we have undertaken now. These are all problems which take some time. ಅದು ತಕ್ಷಣದಲ್ಲಿ ಈಗಲೇ ಆಗತಕ್ಕಂಥದ್ದು ಅಲ್ಲ. ಮಾನ್ಯ ಮಾಧುಸ್ವಾಮಿಯವರು ಯಾವುದೋ ಒಂದು ಸಬ್ ಸ್ಟೇಷನ್ ಅಲ್ಲಿ ಆಗುವ ಬದಲು ಇನ್ನೊಂದು ಕಡೆ ಆದರೆ ಅನುಕೂಲವಾಗುತ್ತದೆ ಎಂದು ಹೇಳಿದರು. ಈ ಸಲಹೆ ಏನು ಅವರು ಕೊಡುತ್ತಾರೆ ಅದನ್ನು ಮಾನ್ಯ ಸಚಿವರು ಹೇಗೆ ಇಂಪ್ಲಿಮೆಂಟೇಷನ್ ಮಾಡಬೇಕು ಎನ್ನುವುದನ್ನು ಹೇಳುತ್ತಾರೆ.

ಶ್ರೀ ಕೆ. ಜಯರಾಮರೆಡ್ಡಿ :— ಇಷ್ಟು ಆಗಬೇಕಾದರೆ ರೈತ ಸತ್ತುಹೋಗಿಬಿಡುತ್ತಾನೆ. ಏಕೆಂದರೆ ಪ್ರತಿವರ್ಷ ಇದೇರೀತಿ ಅಡ್ಡಿಯಾಗುತ್ತಿದ್ದದರೆ ಹೇಗೆ?

ಅಧ್ಯಕ್ಷರು :— ಮುಂದಿನ ಪ್ರಶ್ನೆ ಯೋಗಿಶ್ ಭಟ್.

ಶ್ರೀ ಶರಣಬಸಪ್ಪ ದರ್ಶನಾಪುರ :— ಪ್ರಶ್ನೆ ಸಂಖ್ಯೆ 225ಕ್ಕೆ ಸ್ವಲ್ಪ ಸಮಯ ಕೇಳಿದ್ದೇನೆ.

ಅಧ್ಯಕ್ಷರು :— ಎಷ್ಟು ಸಮಯ ಬೇಕು?

ಶ್ರೀ ಶರಣಬಸಪ್ಪ ದರ್ಶನಾಪುರ :— ಒಂದು ವಾರ ಬೇಕು. ಮುಂದಿನ ಸೋಮವಾರ ಅಥವಾ ಮಂಗಳವಾರ ಉತ್ತರ ಕೊಡುತ್ತೇನೆ.

MR. SPEAKER :— I will give you two days time, not more than two days. ನಾನು ಎರಡು ದಿವಸಗಳಲ್ಲಿ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :— ಕಳೆದ ಅಧಿವೇಶನದಲ್ಲಿ 125 ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು :— ನನಗೆ ನಿಮ್ಮ ಸಮಸ್ಯೆ ಅರ್ಥವಾಗಿದೆ. ಅವರು ಒಂದು ವಾರ ಕೇಳಿದರು. ನಾನು ಎರಡು ದಿವಸ ಎಂದು ಹೇಳಿದ್ದೇನೆ. ಎರಡು ದಿವಸಗಳಲ್ಲಿ ಉತ್ತರ ತರಿಸಿಕೊಳ್ಳುತ್ತೇನೆ. ಎರಡು ದಿವಸಗಳಲ್ಲಿ ಉತ್ತರ ತರಿಸಿಕೊಡದೇ ಹೋದರೆ ಮತ್ತೆ ಏನು ಮಾಡಬೇಕು ಎನ್ನುವುದನ್ನು ಸಭಾನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಲ್ಲಿ ನಾನು ಅನೌನ್ಸ್ ಮಾಡುತ್ತೇನೆ. please give me time.

ಗುಬ್ಬಿ ತಾಲ್ಲೂಕಿನ ನಿಟ್ಟೂರಿನಲ್ಲಿ ಪೊಲೀಸ್ ಠಾಣೆ ಮಂಜೂರು.

6(03) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಗುಬ್ಬಿ ತಾಲ್ಲೂಕು, ನಿಟ್ಟೂರು ಗ್ರಾಮಕ್ಕೆ ಪೊಲೀಸ್ ಠಾಣೆ ಮಂಜೂರು ಮಾಡಬೇಕೆಂದು ಅಲ್ಲಿನ ಸಾರ್ವಜನಿಕರಿಂದ ಮತ್ತು ಶಾಸಕರಿಂದ ಸುಮಾರು 8-10 ವರ್ಷಗಳಿಂದ ಸರ್ಕಾರಕ್ಕೆ ಒತ್ತಡ ಬರುತ್ತಿರುವುದು ನಿಜವೇ?

2. ಈ ವಿಚಾರದಲ್ಲಿ ವಿಧಾನಸಭೆಯಲ್ಲಿ ಮಂಜೂರು ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದು ನಿಜವಲ್ಲವೇ? ಹಾಗಿದ್ದಲ್ಲಿ ಆ ಬಗ್ಗೆ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು?

3. ಈ ವರ್ಷವಾದರೂ ಅದನ್ನು ಮಂಜೂರು ಮಾಡಿಕೊಡಲಾಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

1. ಹೌದು.

2. ಹೌದು,

ಹಣಕಾಸಿನ ಕೊರತೆಯಿಂದಾಗಿ ಈ ಆಶ್ವಾಸನೆ ಪೂರೈಸಲು ಸಾಧ್ಯವಾಗಿಲ್ಲ.

3. ಹೊಸ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡುವಾಗ ನಿಟ್ಟೂರು ಠಾಣೆಯ ಬಗೆಗೂ ಪರಿಗಣಿಸಲಾಗುವುದು.

ಅಧ್ಯಕ್ಷರು :— ಮಾನ್ಯ ಸದಸ್ಯರಾದ ಶ್ರೀ ಜಿ.ಎಸ್. ಶಿವನಂಜಪ್ಪ ಅವರ ಪರವಾಗಿ ಶ್ರೀ ಎಸ್.ಎಂ. ನಾಗರಾಜ್ ಅವರು ಕೇಳುತ್ತಾರೆ.